ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ದಿನಾಂಕ: 1.7.2002ಕ್ಕೆ ಕರ್ನಾಟಕ ಹಾಲು ಮಹಾಮಂಡಳಿಯ ಸದಸ್ಯ ಹಾಲು ಒಕ್ಕೂಟಗಳ ಅಡಿಯಲ್ಲಿ ಪ್ರಸ್ತುತ 1816.67 ಮೆಟ್ರಿಕ್ ಟನ್ ಹಾಲಿನ ಪುಡಿ ದಾಸ್ತಾನು ಇರುತ್ತದೆ.

ಆ) ತಿಂಗಳುವಾರು ತಯಾರಾಗಿದ್ದು ದಾಸ್ತಾನಿರುವ ಕೆನೆರಹಿತ ಹಾಲಿನ ಪುಡಿಯ ವಿವರಗಳು ಈ ಕೆಳಕಂಡಂತಿವೆ:

1.	ಅಕ್ಟೋಬರ್ 2001	321,82 ಎಂ.ಟಿ.
2.	ನವೆಂಬರ್ 2001	175,17 ಎಂ.ಟಿ
3.	ಡಿಸೆಂಬರ್ 2001	70,00 ಎಂ.ಟಿ
4.	ಜನವರಿ 2002	180,01 ಎಂ.ಟಿ
5.	ಫೆಬ್ರವರಿ 2002	76,77 ಎಂ.ಟಿ
6.	ಮಾರ್ಚ್ - ಮೇ 2002	-
7.	ಜೂನ್ 2002	505,25 ಎಂ.ಟಿ
8.	ಜುಲೈ 2002	339,65 ಎಂ.ಟಿ.
		1578,00 ಎಂ.ಟಿ
	ವಿವಿಧ ಡೇರಿಗಳಲ್ಲಿ ಸ್ವಂತ ಬಳಕೆಗೆ ಬೇಕಾಗಿರುವ ಕೆನೆರಹಿತ ಹಾಲಿನ ಪುಡಿ	238,00 ಎಂ.ಟಿ.
	ಒಟ್ಟು ದಾಸ್ತಾನು	1816.67

ಇ) ಕೆನೆರಹಿತ ಹಾಲಿನ ಪುಡಿಯ ಆಯಸ್ಸು ಸಾಮಾನ್ಯವಾಗಿ 12 ರಿಂದ 18 ತಿಂಗಳುಗಳು.

ಈ) ಪ್ರಸ್ತುತ ದಾಸ್ತಾನಿನಲ್ಲಿರುವ ಅಕ್ಟೋಬರ್, ನವೆಂಬರ್ ಹಾಗೂ ಡಿಸೆಂಬರ್ ತಿಂಗಳಿನಲ್ಲಿ ಉತ್ಪಾದಿಸಿದ ಹಾಲಿನ ಪುಡಿಯಲ್ಲಿ ಈಗಾಗಲೇ 400 ಮೆಟ್ರಿಕ್ ಟನ್ ಮಾರಾಟಕ್ಕೆ ಖರೀದಿದಾದರರಿಂದ ಒಪ್ಪಿಗೆ ಬಂದಿದ್ದು ಜುಲೈ ಅಂತ್ಯದೊಳಗೆ ವಿಲೇವಾರಿಯಾಗಲಿದೆ. ಆದುದರಿಂದ ಹಾಲಿನ ಪುಡಿ ನಿರುಪಯುಕ್ತ ಆಗುವ ಸಂಭವವಿರುವುದಿಲ್ಲ. ಉಳಿದಿರುವ ಹಾಲಿನ ಪುಡಿಯನ್ನು ಕ್ರಮೇಣ ವಿಲೇವಾರಿ ಮಾಡಲಾಗುವುದು.

ಉತ್ತರ ಕರ್ನಾಟಕದಲ್ಲಿ ರೇಷ್ಮೆ ಅಭಿವೃದ್ಧಿಪಡಿಸುವುದು

610(943) ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕರ್ನಾಟಕದಲ್ಲಿ ರೇಷ್ಮೆ ಬೆಳೆಯನ್ನು ಬೆಳೆಯಲು ಅನುಕೂಲಕರವಾದ ಹವಾಗುಣ ಇರುವುದರಿಂದ ರೇಷ್ಮೆ ಬೆಳೆಯನ್ನು ಹೆಚ್ಚಿಗೆ ಬೆಳೆಯಲು ಯಾವ ವಿಶೇಷವಾದ ಕ್ರಮವನ್ನು ಕೈಗೊಳ್ಳಲಾಗಿದೆ.

ಅ) ಬೆಳಗಾವಿ ಜಿಲ್ಲೆಯಲ್ಲಿ ರೇಷ್ಮೆ ಬೆಳೆಯನ್ನು ಬೆಳೆಯಲು ಯಾವ ವಿಶೇಷವಾದ ಕ್ರಮವನ್ನು ಕೈಗೊಳ್ಳಲಾಗುವುದು ?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು)

ಅ) ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ರೇಷ್ಮೆ ಅಭಿವೃದ್ಧಿಗಾಗಿ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

1. ರೈತರಿಗೆ ರೇಷ್ಮೆ ವ್ಯವಸಾಯ ಪ್ರಾರಂಭಿಸಲು ಹಿಪ್ಪುನೇರಳೆ ನಾಟಿ, ಹುಳು ಸಾಕಾಣಿ ಸಲಕರಣೆಗಳ ಖರೀದಿ ಮತ್ತು ಹುಳುಸಾಕಣೆ ಮನೆ ನಿರ್ಮಾಣಕ್ಕೆ ವಾಣಿಜ್ಯ ಬ್ಯಾಂಕುಗಳ ಮೂಲಕ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ.

2. ಸುಧಾರಿತ ಹಿಪ್ಪುನೇರಳೆ ತಳಿಗಳ ಸಸಿಗಳನ್ನು ಬೆಳಸಿ ವಿತರಿಸಲಾಗುತ್ತಿದೆ.

3. ರೈತರಿಗೆ ತಾಂತ್ರಿಕ ಸಲಹೆ ನೀಡಲು ತಾಂತ್ರಿಕ ಸೇವಾ ಕೇಂದ್ರಗಳು:ಗೂಡು ಮಾರಾಟಕ್ಕೆ ಗೂಡಿನ ಮಾರುಕಟ್ಟೆಗಳು ಮತ್ತು ರೋಗ ರಹಿತ ರೇಷ್ಮೆ ಮೊಟ್ಟೆ ಪಡೆಯಲು ಬಿತ್ತನೆ ಕೋಠಿಗಳನ್ನು ಸ್ಥಾಪಿಸಲಾಗಿದೆ.

4. ಪ್ರಾತ್ಯಕ್ಷತಾ ತರಬೇತಿ ಒದಗಿಸಲು ಮೂಲತಳಿ ಬಿತ್ತನೆ ಗೂಡುಗಳನ್ನು ಉತ್ಪಾದಿಸಲು ಹಾಗೂ ಬಿತ್ತನೆ ಕಡ್ಡಿ:ಸಸಿಗಳನ್ನು ಬೆಳೆಸಲು ರೇಷ್ಮೆ ಕೃಷಿ ಕ್ಷೇತ್ರಗಳನ್ನು ಪ್ರಾರಂಭಿಸಲಾಗಿದೆ.

5. ಸಾಂಪ್ರಾದಾಯಿಕ ಜಿಲ್ಲೆಗಳ ಪ್ರಗತಿಪರ ರೇಷ್ಮೆ ಬೆಳೆಗಾರರ ಜೊತೆಯಲ್ಲಿದ್ದು ತಾಂತ್ರಿಕ ತರಬೇತಿ ಪಡೆಯಲು ಹೊಸ ಪ್ರದೇಶಗಳ ರೈತರನ್ನು ತರಬೇತಿಗೆ ಆಯ್ಕೆ ಮಾಡಿ ಕಳುಹಿಸಿ ಹೋಗಿ ಬರಲು ಪ್ರಯಾಣ ವೆಚ್ಚ ಹಾಗೂ ಶಿಷ್ಯ ವೇತನ ನೀಡಿ ತಾಂತ್ರಿಕ ತರಬೇತಿ ಒದಗಿಸಲಾಗುತ್ತಿದೆ.

6. ಹೆಚ್ಚು ಇಳುವರಿ ನೀಡುವ ಹೊಸ ರೇಷ್ಮೆ ಹೈ ಬ್ರಿಡ್ ತಳಿ ಮೊಟ್ಟೆಗಳನ್ನು ರಿಯಾಯಿತಿ ದರದಲ್ಲಿ ಸರಬರಾಜು ಮಾಡಲಾಗುತ್ತಿದೆ.

7. ಹೊಸ ಪ್ರದೇಶಗಳಲ್ಲಿ ಉತ್ಪಾದನೆಯಾಗಿ ಮಾರಾಟವಾದ ಪ್ರತಿ ಕೆ.ಜಿ. ರೇಷ್ಮೆಗೂಡಿಗೆ ರೂ.5ರ ಪ್ರೋತ್ಸಾಹಧನ ನೀಡಲಾಗುತ್ತಿದೆ.

8. ಹನಿ ನೀರಾವರಿ ಪದ್ಧತಿ ಅಳವಡಿಕೆ ಮತ್ತು ಹುಳು ಸಾಕಣೆ ಮನೆ, ನಿರ್ಮಾಣಕ್ಕೆ ಸಹಾಯ ಧನ ನೀಡಲಾಗುತ್ತಿದೆ.

9. ಹೊಸ ಪ್ರದೇಶದಲ್ಲಿ ಉತ್ಪಾದನೆಯಾಗಿ ವಹಿವಾಟಾದ ರೇಷ್ಮೆ ಪ್ರತಿ ಕೆ.ಜಿ.ಗೆ ರೂ. 50-00 ಪ್ರೋತ್ಸಾಹಧನ ನೀಡಲಾಗುತ್ತಿದೆ.

10. ರೇಷ್ಮೆ ನೂಲು ಬಿಚ್ಚಾಣಿಕೆಯನ್ನು ಪ್ರೋತ್ಸಾಹಿಸಲು ನೂಲು ಬಿಚ್ಚಾಣಿಕೆ ಘಟಕಗಳ ಸ್ಥಾಪನೆಗೆ ವಾಣಿಜ್ಯ ಬ್ಯಾಂಕುಗಳ ಮೂಲಕ ಸಾಲ ಸೌಲ್ಯ ಒದಗಿಸಲಾಗುತ್ತಿದೆ.

11. ಮಲ್ಟಿಎಂಡ್ ರೀಲಿಂಗ್ ಘಟಕಗಳ ಸ್ಥಾಪನೆಗೆ ಬಡ್ಡಿ ಸಹಿತ ಸಾಲ ಮತ್ತು ಸಹಾಯಧನ ಒದಗಿಸಲಾಗುತ್ತಿದೆ.

ಅ) "ಆ" ನಲ್ಲಿ ನಮೂದಿಸಿರುವ ಎಲ್ಲಾ ಕಾರ್ಯಕ್ರಮಗಳು ಬೆಳಗಾಂ ಜಿಲ್ಲೆಯಲ್ಲಿ ಜಾರಿಯಲ್ಲಿವೆ. ಇದಲ್ಲದೇ ಬೆಳಗಾಂ ಜಿಲ್ಲೆಯ ಐದು ತಾಲ್ಲೂಕುಗಳನ್ನು ದ್ವಿತಳಿ ಬಿತ್ತನೆ ಪ್ರದೇಶವೆಂದು ಗುರುತಿಸಿ ಉಚಿತ ಸೋಂಕು ನಿವಾರಣೆ ಸೌಲಭ್ಯ ಒದಗಿಸಿ ಈ ಪ್ರದೇಶದಲ್ಲಿ ಬೆಳೆದು ಬಿತ್ತನೆಗೆ ಯೋಗ್ಯವಾದ ಎಲ್ಲಾ ಗೂಡುಗಳಿಗೆ ಬಿತ್ತನೆ ದರ ಒದಗಿಸಲಾಗುತ್ತಿದೆ. 2002-03ನೇ ಸಾಲಿನಲ್ಲಿ 1.50 ಲಕ್ಷ ಸಿಎಸ್‌ಆರ್ ಸಂಕರಣ ಮೊಟ್ಟೆಗಳನ್ನು ಚಾಕಿ ಮಾಡಿ 75 ಮೆ.ಟನ್ ದ್ವಿತಳಿ ಗೂಡು ಉತ್ಪಾದಿಸುವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

ರಾಜ್ಯದಲ್ಲಿ ಸಣ್ಣ ಕೈಗಾರಿಕಾ ಉದ್ದಿಮೆಗಳು

611(944) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಸಣ್ಣ ಪ್ರಮಾಣ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕಾ ಉದ್ದಿಮೆಗಳು ಆರ್ಥಿಕ ಮುಗ್ಗಟ್ಟಿನಿಂದ ಹಾಗೂ ಬೇರೆ ಕಾರಣಗಳಿಂದ ಮುಚ್ಚುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕಳೆದ ವರ್ಷ ಎಷ್ಟು ಸಣ್ಣ ಕೈಗಾರಿಕಾ ಉದ್ದಿಮೆಗಳು ಆರ್ಥಿಕ ಮುಗ್ಗಟ್ಟಿನಿಂದ ಹಾಗೂ ಬೇರೆ ಕಾರಣಗಳಿಂದ ಮುಚ್ಚಿರುತ್ತವೆ (ಜಿಲ್ಲಾವಾರು ಮಾಹಿತಿ ನೀಡುವುದು)

ಇ) ಇಂತಹ ಮುಚ್ಚುತ್ತಿರುವ ಸಣ್ಣ ಕೈಗಾರಿಕಾ ಉದ್ದಿಮೆಗಳನ್ನು ಉತ್ತಮ ರೀತಿಯಿಂದ ನಡೆಯುವಂತೆ ಮಾಡಲು ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಪ್ರಮಾಣ ಕೈಗಾರಿಕೆ ಮತ್ತು ಹಜ್ ಸಚಿವರು)

ಅ) ಬಂದಿದೆ.

ಆ) ಈ ಬಗ್ಗೆ ನಿಖರವಾದ ವಿವರಗಳು ಲಭ್ಯವಿರುವುದಿಲ್ಲ. ಆದರೆ, ಏಪ್ರಿಲ್ 2001 ರಂದು ಭಾರತ ಸರ್ಕಾರದವರು ನಡೆಸಿದ ಸಣ್ಣ ಕೈಗಾರಿಕೆಗಳ ಸಮೀಕ್ಷಾ ವರದಿ ಪ್ರಕಾರ, ಸಮೀಕ್ಷೆ ನಡೆಸಿದ ಘಟಕಗಳ ಪೈಕಿ ಶೇ. 50 ರಷ್ಟು ಮಾತ್ರ ಕಾರ್ಯನಿರ್ವಹಿಸುತ್ತಿರುತ್ತವೆ. XXXXXXXXXXXXXXXX ಉಳಿದ ಶೇ. 50 ರಷ್ಟು ಘಟಕಗಳು ರೋಗಗ್ರಸ್ತವಾಗಿರುವುದಾಗಿಯೂ, ರೋಗಗ್ರಸ್ಥ ಹಾದಿಯಲ್ಲಿರುವುದಾಗಿಯೂ ಅಥವಾ ಮುಚ್ಚಿರುವುದಾಗಿಯೂ ವರದಿಯಾಗಿದೆ. ಸಣ್ಣ ಕೈಗಾರಿಕೆಗಳ ಪೂರ್ಣ ಸ್ಥಿತಿಗತಿಗಳನ್ನು ತಿಳಿಯಲು ಭಾರತ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಸಣ್ಣ ಕೈಗಾರಿಕೆಗಳ ಗಣತಿ ಕಾರ್ಯವನ್ನು ಹಮ್ಮಿಕೊಂಡಿರುತ್ತದೆ. ಈ ಮಾಹಿತಿಯು ಮಾರ್ಚ್, 2003 ರಲ್ಲಿ ಲಭ್ಯವಾಗಲಿದೆ.

ಇ) ರಾಜ್ಯದ ಕೈಗಾರಿಕಾ ನೀತಿ 2001-06ರಲ್ಲಿ ರಾಜ್ಯದ ಕೈಗಾರಿಕೆಗಳ ಸರ್ವತೋಮುಖ ಬೆಳವಣಿಗೆಗಾಗಿ ಅನೇಕ ಯೋಜನೆಗಳನ್ನು ರೂಪಿಸಲಾಗಿದೆ. ವಿವರಗಳು ಕೆಳಕಂಡಂತಿದೆ:-

1. ತಂತ್ರಜ್ಞಾನ ಉನ್ನತೀಕರಣ
2. ಗುಣಮಟ್ಟ ಉನ್ನತೀಕರಣ